**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 23.08.2025 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ.ಬಿ ಎಂ ಎನ್ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ.

| | |
|---|---|
| **ನಿ.ಪಿ.21** | ಕಲಿಯೂರು ಗ್ರಾಮದ ಸರ್ವೆ ನಂ.191 ರ ಪಹಣಿ ಪತ್ರಿಕೆ |
| **ನಿ.ಪಿ.22** | ಕಲಿಯೂರು ಗ್ರಾಮದ ಸರ್ವೆ ನಂ.192 ರ ಪಹಣಿ ಪತ್ರಿಕೆ |
| **ನಿ.ಪಿ.23** | ಕಲಿಯೂರು ಗ್ರಾಮದ ಸರ್ವೆ ನಂ.193 ರ ಪಹಣಿ ಪತ್ರಿಕೆ |

ನನ್ನ ದಾವೆಯನ್ನು ಪುರಸ್ಕರಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎ ಪಿ ಎಸ್ ವಕೀಲರಿಂದಃ**

ನನ್ನ ಅಜ್ಜನಾದ ಮಲ್ಲಪ್ಪನವರು ಖರೀದಿಸಿದ ದಿಃ01.02.1933 ರ ಕ್ರಯಪತ್ರದಲ್ಲಿ ಸರ್ವೆ ನಂ.191 ಮತ್ತು 192 ಮಾತ್ರ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 193 ರ ಆಸ್ತಿ ಸದರಿ ಕ್ರಯಪತ್ರದಲ್ಲಿ ಕಂಡು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 193 ಕ್ಕೂ ಮತ್ತು ದಿಃ01.02.1933 ರ ಕ್ರಯಪತ್ರಕ್ಕೂ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್.ಹೆಚ್.ಆರ್)**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ತಿ.ನರಸೀಪುರ.